**ಡಾ. ಗಣನಾಥ ಶೆಟ್ಟಿ ಎಕ್ಕಾರು,** ಎಂ.ಎ., ಪಿ.ಎಚ್.ಡಿ.,
ರಾಜ್ಯ ಸಂಪರ್ಕಾಧಿಕಾರಿ, ರಾಷ್ಟ್ರೀಯ ಸೇವಾ ಯೋಜನಾ ಕೋಶ
ಸರ್ಕಾರದ ಪದ ನಿಮಿತ್ತ ಜಂಟಿ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರ

ಕಛೇರಿ : ಬಹು ಮಹಡಿ
ಡಾ. ಬಿ. ಆರ್. ಅಂಬೇಡ್ಕರ್ ವೀದಿ, ಬೆಂಗಳೂರ
ದೂರವಾಣಿ : 080-2228 4498, 2203
ಫ್ಯಾಕ್ಸ್ : 2225 2499 ಮೊ : 99645 8
ಇಮೇಲ್ : gyakkar@gmail

ಸಂಖ್ಯೆ:ಯುಸೇಇ/ರಾಸೇಯೋ/33/2014-15/68 15.12.2014

ಇವರಿಗೆ:
ಕುಲ ಸಚಿವರು / ನಿರ್ದೇಶಕರು,
ವಿಶ್ವವಿದ್ಯಾನಿಲಯ / ನಿರ್ದೇಶನಾಲಯಗಳು.

ಮಾನ್ಯರೆ,

ವಿಷಯ: ಸ್ವಚ್ಛತಾ ಆಂದೋಲನಾ ಮತ್ತು ಪ್ಲಾಸ್ಟಿಕ್ ವಿರುದ್ಧ ಅರಿವು ರಾಜ್ಯ ವ್ಯಾಪಿ ಕಾರ್ಯಕ್ರಮ ಹಮ್ಮಿಕೊಳ್ಳುವ ಬಗ್ಗೆ.

---

ಕೇಂದ್ರ ಸರ್ಕಾರದ ಸ್ವಚ್ಛ ಭಾರತ್ ಆಂದೋಲನ ಮತ್ತು ಪ್ಲಾಸ್ಟಿಕ್ ವಿರುದ್ಧ ಅರಿವು ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲು ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಕೋಶ ನಿರ್ಧರಿಸಿದೆ. ಎನ್.ಎಸ್.ಎಸ್., ವ್ಯಾಪ್ತಿಯ ಎಲ್ಲಾ ವಿಶ್ವವಿದ್ಯಾನಿಲಯ / ನಿರ್ದೇಶನಾಲಯಗಳ ಎಲ್ಲಾ ಮೂರು ಲಕ್ಷ ಸ್ವಯಂಸೇವಕರು ಈ ಬಗ್ಗೆ ಅರಿವು ಮೂಡಿಸಿಕೊಂಡು ಕಾರ್ಯಕ್ರಮದಲ್ಲಿ ಭಾಗವಹಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಇದರ ಅಂಗವಾಗಿ ಆರಂಭೋತ್ಸವ ಕಾರ್ಯಕ್ರಮವನ್ನು ಜನವರಿ 13, 2015ರಂದು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಅದಕ್ಕೆ ಪೂರ್ವಭಾವಿಯಾಗಿ ಕಾರ್ಯಕ್ರಮ ಸಂಯೋಜನಾಧಿಕಾರಿಗಳು ಈ ಕೆಳಗಿನ ಕಾರ್ಯಗಳನ್ನು ಹಮ್ಮಿಕೊಳ್ಳಲು ಸೂಚಿಸಲಾಗಿದೆ.

---

1. ಎಲ್ಲಾ ಯೋಜನಾಧಿಕಾರಿಗಳ ಸಭೆ ಕರೆದು ಈ ಬಗ್ಗೆ ಕಾರ್ಯಕ್ರಮದ ರೂಪುರೇಷೆಯನ್ನು ನಿರ್ಧರಿಸುವುದು.
2. ಕರ ಪತ್ರಗಳ ಮೂಲಕ ವ್ಯಾಪಕ ಪ್ರಚಾರವನ್ನು ನೀಡುವುದು.
3. ಪತ್ರಿಕಾ ಪ್ರಕಟಣೆ ಅಥವಾ ಪತ್ರಿಕಾ ಗೋಷ್ಠಿಗಳ ಮೂಲಕ ವ್ಯಾಪಕ ಪ್ರಚಾರವನ್ನು ನೀಡುವುದು.
4. ಜನವರಿ 13, 2015ರಂದು ವಿಶ್ವವಿದ್ಯಾನಿಲಯ / ನಿರ್ದೇಶನಾಲಯಗಳ ವ್ಯಾಪ್ತಿಯ ಎಲ್ಲಾ ಸಂಸ್ಥೆಗಳಲ್ಲಿ ಕಾರ್ಯಕ್ರಮದ ಆರಂಭೋತ್ಸವ ಮತ್ತು ನಿರಂತರ ಮುಂದುವರಿಕೆಗೆ ಕಾರ್ಯ ಯೋಜನೆಯನ್ನು ರೂಪಿಸುವುದು.
5. ಈ ಬಗ್ಗೆ ವಿಶ್ವವಿದ್ಯಾನಿಲಯ / ನಿರ್ದೇಶನಾಲಯಗಳ ಅಧಿಕಾರಿಗಳೊಂದಿಗೆ ಸಮಾಲೋಚಿಸುವುದು.
6. ಆರಂಭೋತ್ಸವವನ್ನು ವಿಶ್ವವಿದ್ಯಾನಿಲಯ ಆವರಣ / ನಿರ್ದೇಶನಾಲಯಗಳ ಕೇಂದ್ರ ಸ್ಥಾನದಲ್ಲಿ ಹಮ್ಮಿಕೊಳ್ಳುವುದು.
7. ಖರ್ಚುವೆಚ್ಚಗಳನ್ನು ದೈನಂದಿನ ಅನುದಾನದಿಂದ ಬಳಸಿಕೊಳ್ಳಲು ಕಾಲೇಜುಗಳಿಗೆ ಸೂಚಿಸುವುದು.

ರಾಜ್ಯದ ಎಲ್ಲಾ ಮೂರು ಲಕ್ಷ ಸ್ವಯಂಸೇವಕರು ಆರಂಭೋತ್ಸವದಲ್ಲಿ ಭಾಗವಹಿಸಿ ನಂತರ ಪ್ರತಿವಾರ ವಿರಾಮ ಸಂದರ್ಭದಲ್ಲಿ 02 ಗಂಟೆಗಳ ಕಾಲ ದೈನಂದಿನ ಕಾರ್ಯಕ್ರಮದಲ್ಲಿ ಈ ಕಾರ್ಯವನ್ನು ಮುಂದುವರಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ವಿಶ್ವವಿದ್ಯಾನಿಲಯಗಳ ಕುಲಪತಿಗಳು, ಕುಲಸಚಿವರು, ಕಾರ್ಯಕ್ರಮ ಸಂಯೋಜನಾಧಿಕಾರಿಗಳು ಮತ್ತು ಇತರ ಅಧಿಕಾರಿಗಳು ಈ ಆರಂಭೋತ್ಸವದಲ್ಲಿ ಭಾಗವಹಿಸಿ ಚಾಲನೆ ನೀಡುವುದು. ಕಾಲೇಜು ಮಟ್ಟದಲ್ಲಿ ಆಡಳಿತ ಮಂಡಳಿ, ಪ್ರಾಂಶುಪಾಲರು, ಯೋಜನಾಧಿಕಾರಿಗಳು, ಎಲ್ಲಾ ಅಧ್ಯಾಪಕರು ಭಾಗವಹಿಸಿ ಸ್ವಯಂಸೇವಕರಿಗೆ ಸ್ಫೂರ್ತಿ ನೀಡುವಂತೆ ಆರಂಭೋತ್ಸವ ಮತ್ತು ನಿರಂತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಗೊತ್ತುಪಡಿಸಿದ ವಿಶ್ವವಿದ್ಯಾನಿಲಯ / ಕಾಲೇಜುಗಳಲ್ಲಿ ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು, ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ರಾಜ್ಯ ಮಟ್ಟದ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ.

ಇದು ರಾಷ್ಟ್ರೀಯ ಸೇವಾ ಯೋಜನೆಯ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದ್ದು, ಸಂಯೋಜನಾಧಿಕಾರಿಗಳು ಕಾರ್ಯಕ್ರಮದ ಅನುಷ್ಠಾನದಲ್ಲಿ ಗಂಭೀರವಾಗಿ ತೊಡಗಿಸಿಕೊಳ್ಳಲು ಕೋರಲಾಗಿದೆ. ಆರಂಭೋತ್ಸವ ಕಾರ್ಯಕ್ರಮದ ವಿಸ್ತೃತ ವರದಿಯನ್ನು ಕಾರ್ಯಕ್ರಮ ಮುಗಿದ 15 ದಿನದೊಳಗೆ ನೀಡಲು ಕೋರಲಾಗಿದೆ.

ಈ ಬಗ್ಗೆ ತಮ್ಮ ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳಿಗೆ ನಿರ್ದೇಶನ ನೀಡಲು ಕೋರುತ್ತಿದ್ದೇನೆ.

ವಂದನೆಗಳೊಂದಿಗೆ,

ತಮ್ಮ ಆತ್ಮೀಯ,

(ಡಾ:ಗಣನಾಥ ಶೆಟ್ಟಿ).,
ರಾಜ್ಯ ಸಂಪರ್ಕಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಇವರಿಗೆ:

1. ಪ್ರಧಾನ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು.
2. ಶ್ರೀ.ಎ.ಎನ್.ಪೂಜಾರ್, ಯುವ ಅಧಿಕಾರಿಗಳು ಮತ್ತು ಪ್ರಾದೇಶಿಕ ಮುಖ್ಯಸ್ಥರು, ರಾಷ್ಟ್ರೀಯ ಸೇವಾ ಯೋಜನೆ, ಪ್ರಾದೇಶಿಕ ಕೇಂದ್ರ, ಭಾರತ ಸರ್ಕಾರ, ಬೆಂಗಳೂರು.

1. ಸಂಬಂಧಪಟ್ಟ ಎಲ್ಲಾ ವಿಶ್ವವಿದ್ಯಾನಿಲಯ / ನಿರ್ದೇಶನಾಲಯದ ಕಾರ್ಯಕ್ರಮ ಸಂಯೋಜನಾಧಿಕಾರಿಗಳಿಗೆ.
2. ಕಛೇರಿ ಪ್ರತಿ.

ಮೇಲಿನ ಕಾರ್ಯಕ್ರಮವನ್ನು ಎಲ್ಲಾ NSS ಘಟಕಗಳಿರುವ ಸರ್ಕಾರಿ/ಅನುದಾನಿತ/ಅನುದಾನರಹಿತ ಪದವಿ ~~ಪೂರ್ವ~~ ಕಾಲೇಜಿನ ಪ್ರಾಂಶುಪಾಲರು ಹಾಗೂ NSS ಕಾರ್ಯಕ್ರಮಾಧಿಕಾರಿಗಳು ಕಡ್ಡಾಯವಾಗಿ ಹಮ್ಮಿಕೊಂಡು ಕಾರ್ಯಕ್ರಮ ನಡೆಸಿದ ಬಗ್ಗೆ ವರದಿಯನ್ನು ನೀಡಲು ಸೂಚಿಸಿದೆ.

5.1.15
ಜಂಟಿ ನಿರ್ದೇಶಕರು
ಮೂಲಭೂತ ಸವಲತ್ತು
ಪದವಿ ಪೂರ್ವ ಶಿಕ್ಷಣ ಇಲಾಖೆ
ಮಲ್ಲೇಶ್ವರಂ, ಬೆಂಗಳೂರು-12

ಪ್ರತಿ ① ಉಪ-ಆಡಳಿತ ಶಾಖೆಗೆ ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು

YS-NSS-33-2014-15